ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.	
ಅಕ್ಕಿ ರೂಪಾಯಿ 1ಕ್ಕೆ	7	6 ರಿಂದ 6¾ರ ವರಿಗೆ	ಸೇರುಗಳು.
ರಾಗಿ ,, ...	18	14 ರಿಂದ 15ರ ವರಿಗೆ	

ವ್ಯವಸಾಯ ಕೆಲಸ—ರಾಗಿ ಕಳೇಕೀಳುವದು.

ದನಗಳು ಬಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಸಾಧಾರಣವಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಬಿತ್ತುವದೂ ಮತ್ತು ಸಾಲು ಹೊಡಿಯುವದೂ ಮುಕ್ತಾಯಲ್ಪಾಲ್ ಮುಗಿದು ಇವೆ.

ನಿಂತಿರುವ ಪೈರುಗಳು ಬಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರು—ಹೊಸಕೋಟೆ ತಾಲ್ಲೂಕಿನಲ್ಲಿ ವೈಶಾಖಿ ಭತ್ತದ ಕುಯ್ಯಲು ಆಗಿ ಇದೆಯೆಂದು ರಿಪೋರ್ಟಾಗಿದೆ.

10. ಕಾಲದ ಆಯುತಿಯು ಚೆನ್ನಾಗಿದೆ. ಎಲ್ಲಾ ಕಡೆಯಲ್ಲಿಯೂ ಮಳೆಯು ಬೇಕಾಗಿದೆ. ಆಹಾರ ಜಿನಸಿ ಸಾಕಾದಷ್ಟು ಇವೆ. ಆದರೆ, ಅವುಗಳ ಧಾರಣೆಯು ಇನ್ನೂ ಚಡಾವಿನಲ್ಲಿದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ ತಾಲ್ಲೂಕಿನಲ್ಲಿ ಬಿದರಹಳ್ಳಿಯಲ್ಲಿಯೂ ಮತ್ತು ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಮದುರೆ, ತೂಬಗೆರೆ ಈ ಹೋಬಳಿಗಳಲ್ಲಿಯೂ, ಪ್ಲೇಗ್ ಇದೆಯೆಂದು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಸುಮಾರಾಗಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ತರೀ ಭೂಮಿಗಳನ್ನು ಉತ್ತು, ಪೈರಿಡುತ್ತಿದ್ದಾರೆ.

ನಿಂತಿರುವ ಪೈರುಗಳ ಸ್ಥಿತಿ—ಗುಡಿಬಂಡೆ ಸಬ್ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಂಬ್ಳೀ ಹುಳಗಳು ಹಿಡಿದ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ಬೌರಿಂಗ್‌ಪೇಟೆ ವಿನಹಾ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಮತ್ತು ಸಬ್ ತಾಲ್ಲೂಕಿನಲ್ಲಿಯೂ ಭತ್ತ, ಮುಳಬಾಗಲು, ಶಿಡ್ಲಘಟ್ಟ, ಮಾಲೂರು ಇವುಗಳಲ್ಲಿ ರಾಗಿ, ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪುರ, ಇವುಗಳಲ್ಲಿ ಹುರುಳಿ. ಶ್ರೀನಿವಾಸಪುರ ಮತ್ತು ಶಿಡ್ಲಘಟ್ಟ, ಇವುಗಳಲ್ಲಿ ಸಾಮೆ. ಶಿಡ್ಲಘಟ್ಟದಲ್ಲಿ ಸಜ್ಜಿ ಮತ್ತು ಮಾಲೂರು ತಾಲ್ಲೂಕಿನಲ್ಲಿ ಅವರೆ ಮತ್ತು ತೊಗರಿ.

ಕುಯ್ಯಲಾದ ಪೈರುಗಳು—ಗೋರೀಬಿದನೂರು ತಾಲ್ಲೂಕಿನಲ್ಲಿ ಭತ್ತ ಮತ್ತು ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿ ಬರಗು.

ಉತ್ಪತ್ತಿಯ ಅಂದಾಜು—ಭತ್ತ 12 ಆಣೆ. ಬರಗು 6 ರಿಂದ 8 ಆಣೆ ವರಿಗೆ.

10. ಕಾಲದ ಆಯುತಿಯು ಸುಮಾರಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ. ಬಿತ್ತಿರುವ ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

11. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿಯೂ ಮತ್ತು ಕೋಲಾರದ ತಾಲ್ಲೂಕಿನಲ್ಲಿ ಕಸಬಾ ಕೋಲಾರ ಮತ್ತು ಷಿಲ್ಲಿಂಗೇರಿ, ಇವುಗಳಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು, ಮತ್ತು ಗೋರೀಬಿದನೂರು ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಕಾಲರಾ, ಇವು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುವದು ಮತ್ತು ಬಿತ್ತುವದೂ ನಡಿಯುತ್ತಲಿವೆ.

ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ಗುಬ್ಬಿ, ಇವುಗಳಲ್ಲಿ ಭತ್ತ. ತುಮಕೂರು, ಮದ್ದಗಿರಿ, ಗುಬ್ಬಿ ತಿಪಟೂರು, ಪಾವಗಡ, ಈ ತಾಲ್ಲೂಕುಗಳಲ್ಲಿಯೂ ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿಯೂ ರಾಗಿ, ಅವರೆ, ತೊಗರಿ ಮತ್ತು ತಡಗಣಿ.

ಕುಯ್ಯಲಾದ ಪೈರುಗಳು—ತಮಕೂರು, ಗುಬ್ಬಿ, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಭತ್ತ; ಮತ್ತು ತುಮಕೂರಿನಲ್ಲಿ ಕಬ್ಬು.

10. ಕಾಲದ ಆಯುತಿಯು ಚೆನ್ನಾಗಿದೆ. ಆದರೆ, ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಕುಷ್ಕೀ ಪೈರುಗಳಿಗೆ ಮಳೆಯು ಹೆಚ್ಚಾಗಿ ಬೇಕಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ. ಮದ್ದಗಿರಿ ಮತ್ತು ಪಾವಗಡ ಈ ತಾಲ್ಲೂಕುಗಳಲ್ಲಿ, ಕಾಲರಾ ಅಡಗಿ ಇದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

742

181

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ನಂಜನಗೂಡು, ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು ಹಸನುಮಾಡುತ್ತಿದ್ದಾರೆ. ಮೈಸೂರು, ಚಾಮರಾಜನಗರ, ಶ್ರೀರಂಗಪಟ್ಣ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಪೈರುಗಳು ಬಾಡಿಹೋಗುತ್ತಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವುಗಳು ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತ, ಮತ್ತು ಎಡತೊರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಮೈಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಮೈಸೂರು, ಚಾಮರಾಜನಗರ, ಎಡತೊರೆ, ಗುಂಡ್ಲುಪೇಟೆ, ನಂಜನಗೂಡು, ಟಿ. ನರಸೀಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ; ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳಲ್ಲಿ ಎಳ್ಳು; ಎಡತೊರೆ ತಾಲ್ಲೂಕಿನಲ್ಲಿ ಕಾರ್ ಭತ್ತ, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಬ್ಬು, ಉದ್ದು, ಹೆಸರು; ಇವುಗಳು ಕುಯ್ಯಲಾಗುತ್ತಿವೆ. ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡಿಸುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಮೈಸೂರು, ಚಾಮರಾಜನಗರ, ಮಳವಳ್ಳಿ, ಮಂಡ್ಯ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಮೈಸೂರು, ಹುಣಸೂರು, ನಂಜನಗೂಡು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮತ್ತು ಹುಣಸೂರು, ನಂಜನಗೂಡು, ಮಂಡ್ಯ, ಈ ಕಸಬಾಗಳಲ್ಲಿಯೂ ಪ್ಲೇಗು ಮತ್ತು ಹೆಗ್ಗಡದೇವನಕೋಟೆಯ ಕೆಲವು ಭಾಗಗಳಲ್ಲಿ ಕಾಲರಾ, ಇವು ಇರುತ್ತಿವೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆ ಎಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಎಲ್ಲಾ ಕಡೆಯಲ್ಲಿಯೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಚನ್ನರಾಯಪಟ್ಣ ತಾಲ್ಲೂಕಿನಲ್ಲಿ ಹುರಳಿಯನ್ನು ಬಿತ್ತುವದಕ್ಕಾಗಿ ಭೂಮಿಯನ್ನು ತಯಾರ್ಮಾಡುತ್ತಿದ್ದಾರೆ. ಹೊಳೇನರಸೀಪುರದ ತಾಲ್ಲೂಕಿನಲ್ಲಿ ದೊಡ್ಡರಾಗಿ ಮತ್ತು ಮೆಣಸಿನಕಾಯಿ, ಮತ್ತು ಹಾಸನದಲ್ಲಿ ಭತ್ತ, ಇವುಗಳ ಸಸಿಗಳನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ರಾಗಿ, ಭತ್ತ, ಕಬ್ಬು, ಹರಳಿ, ತೊಗರಿ, ಮೆಣಸಿನಕಾಯಿ, ಇವುಗಳೆಲ್ಲವೂ ಸಾಧಾರಣವಾಗಿ ಒಳ್ಳೇ ಸ್ಥಿತಿಯಲ್ಲಿವೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಹೇಮಾವತಿ ನದಿಯ ಪಕ್ಕಗಳಲ್ಲಿರುವ ಕೆಲವು ಭತ್ತದ ಗದ್ದೆಗಳು ಪ್ರವಾಹದ ದೆಸೆಯಿಂದ ನೀರುಬಂದು ತುಂಬಿಕೊಂಡದ್ದರಿಂದ, ಅವುಗಳಲ್ಲಿರುವ ಭತ್ತದ ಪೈರುಗಳಿಗೆ ಸ್ವಲ್ಪ ನಷ್ಟವು ವುಂಟಾಗಿದೆ.

ಬಿತ್ತನೆಯಾದ ಪೈರು—ಅರಸೀಕೆರೆ ತಾಲ್ಲೂಕಿನಲ್ಲಿ ದೊಡ್ಡ ರಾಗಿಯನ್ನು ಬಿತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಕಾರ್‌ಭತ್ತ, ಕಬ್ಬು, ಹುಚ್ಚೆಳ್ಳು ಮತ್ತು ಜೋಳವು.

10. ಕಾಲದ ಆಯತಿಯು ಚೆನ್ನಾಗಿದೆ. ಅರಸೀಕೆರೆಯಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ. ಇದು ಹೊರ್ತು ಡಿಸ್ಟ್ರಿಕ್ಟಿನ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಮಳೆಯು ಚೆನ್ನಾಗಿ ಆಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹಾಸನ, ಬೇಲೂರು ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗು, ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು ಮತ್ತು ಜ್ವರವು, ಇವುಗಳು ಇದ್ದುಕೊಂಡು ಇವೆಯೆಂದು ರಿಪೋರ್ಟಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಮತ್ತು ಮೇವೂ, ಇವುಗಳು ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕಳೆ ಕೀಳುವ ಕೆಲಸಗಳು ನಡೆಯುತ್ತಿವೆ.

ನಿಂತಿರುವ ಪೈರುಗಳು—ಯಾವವೆಂದರೆ, ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ, ರಾಗಿ, ಕಬ್ಬು ಇವುಗಳು ಒಳ್ಳೇ ಸ್ಥಿತಿಯಲ್ಲಿವೆ. ನಗರ, ಸಾಗರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆ ಫಸಲಿಗೆ ಕೊಳೆ ರೋಗವು ಬಂದಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸು ಸಾಕು.

11. ಜನಾರೋಗ್ಯವು ಸಾಧಾರಣವಾಗಿ ಸುಮಾರಾಗಿದೆ. ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಸಿಡುಬು ಕಮ್ಮಿಯಾಗಿ ಬರುತ್ತಿದೆ. ಹೊನ್ನಾಳಿ ತಾಲ್ಲೂಕಿನ ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ಲೇಗು ಇರುತ್ತಲಿದೆ.

12. ಶಿವಮೊಗ್ಗ ಮತ್ತು ಸಾಗರ, ಈ ತಾಲ್ಲೂಕುಗಳ ಕೆಲವು ಕಡೆಗಳಲ್ಲಿ ಗೋಮಾರಿರೋಗವು ಇದ್ದುಕೊಂಡು ಇದೆ. ನಗರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಅದು ಕಮ್ಮಿಯಾಗಿ ಬರುತ್ತಲಿದೆ. ಸಾಕಾದಷ್ಟು ಹುಲ್ಲೂ, ಮೇವೂ, ದೊರಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಚಿಕ್ಕ ಮಗಳೂರು, ಕೊಪ್ಪ, ಮೂಡಿಗೆರೆ, ಎಡೇಹಳ್ಳಿ, ಶೃಂಗೇರಿ, ಇವುಗಳ ಮಲನಾಡು ಪ್ರಾಂತ್ಯಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಚಿಕ್ಕ ಮಗಳೂರಿನಲ್ಲಿ ಕಬ್ಬು, ಭತ್ತ, ರಾಗಿ ಮತ್ತು ತೊಗರಿ; ಕಡೂರಿನಲ್ಲಿ ಜೋಳ, ಹರಳು, ಉದ್ದು, ಹೆಸರು, ಕೊತ್ತುಂಬರಿ, ಭತ್ತ, ಕಬ್ಬು ಮತ್ತು ಹುಚ್ಚೆಳ್ಳು; ತರೀಕೆರೆಯಲ್ಲಿ ಕಬ್ಬು ಮತ್ತು ಭತ್ತ; ಕೊಪ್ಪದಲ್ಲಿ ಕಬ್ಬು, ಅಡಿಕೆ, ಕಾಫಿ, ಯಾಲಕ್ಕಿ ಮತ್ತು ಭತ್ತ; ಮೂಡಗೆರೆಯಲ್ಲಿ ಭತ್ತ ಮತ್ತು ರಾಗಿ; ಎಡೇಹಳ್ಳಿಯಲ್ಲಿ ಕಬ್ಬು ಮತ್ತು ಕಾಫಿ; ಶೃಂಗೇರಿಯಲ್ಲಿ ಅಡಿಕೆ; ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಕಡೂರು ತಾಲ್ಲೂಕಿನಲ್ಲಿ ರಾಗಿ, ಜೋಳ, ಹುರುಳಿ, ಹರಳು, ತಡಗಣಿ, ಮೆಣಸಿನಕಾಯಿ, ಅವರೆ, ತೊಗರಿ, ಭತ್ತ, ಇವುಗಳನ್ನು ಬಿತ್ತುತ್ತಿದ್ದಾರೆ. ಮತ್ತು ತರೀಕೆರೆಯಲ್ಲಿ ರಾಗಿ, ತೊಗರಿ ಮತ್ತು ಮೆಣಸಿನಕಾಯಿ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ.

11. ಮೂಡಿಗೆರೆ ಕಸಬಾದಲ್ಲೂ ಮತ್ತು ಆದೇ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಸಿಡುಬು, ಮತ್ತು ಕಸಬಾ ಚಿಕ್ಕ ಮಗಳೂರು ಮತ್ತು ಆದರ ಪಕ್ಕದಲ್ಲಿ ಪ್ಲೇಗ್ ಇವು ಇರುವದು ಹೊತ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತರೀಕೆರೆ, ಚಿಕ್ಕ ಮಗಳೂರು, ಶೃಂಗೇರಿ ಇವುಗಳಲ್ಲಿ "ದೊಡ್ಡ ರೋಗವು" ಕಮ್ಮಿಯಾಗುತ್ತಿದೆಯೆಂದು ರಿಪೋರ್ಟಾಗಿದೆ. ಶೃಂಗೇರಿಯಲ್ಲಿ ಕೆಲವು ಗ್ರಾಮಗಳಲ್ಲಿ ದನಗಳಿಗೆ "ಲಾಲ್ ಸಂಕೋಲೆ" ರೋಗವು ತಲೆದೋರಿದೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವಂದರೆ, ಜೋಳ, ರಾಗಿ, ಹುರುಳಿ, ಉದ್ದು, ಹರಳು, ತೊಗರಿ, ಅರಳಿ, ನವಣೆ, ಭತ್ತ, ಕಬ್ಬು, ಇವುಗಳು ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಹಿರಿಯೂರು, ಮತ್ತು ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಭತ್ತ; ಹಿರಿಯೂರು, ಹೊಳಲ್ಕೆರೆ, ದೇವನಗೆರೆ ಈ ತಾಲ್ಲೂಕುಗಳಲ್ಲಿ ರಾಗಿ ಮತ್ತು ಅವರೆ; ಹಿರಿಯೂರು, ಹೊಳಲ್ಕೆರೆ, ಜಗಲೂರು ಈ ತಾಲ್ಲೂಕುಗಳಲ್ಲಿ ಸಜ್ಜೆ; ಮತ್ತು ಹಿರಿಯೂರು ತಾಲ್ಲೂಕಿನಲ್ಲಿ ಹೊಗೇಸೊಪ್ಪು ಮತ್ತು ಮೆಣಸಿನಕಾಯಿ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಅನುಕೂಲವಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಆಗಸ್ಟು 20ನೆಯ ತಾರೀಖು. } ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ.